ನೆರೂಡ ಹೆಂಗಸರೊಂದಿಗೆ ಅನುಮಾನಾಸ್ಪದವಾಗಿ ವರ್ತಿಸಿದ್ದನ್ನು ಯಾವ ತಕರಾರೂ ಇಲ್ಲದೆ, ಮೇಲೆ ಉಲ್ಲೇಖಿಸಿದ ಆಕ್ಷೇಪಾರ್ಹ ಪ್ರಸಂಗವನ್ನು ಕೂಡ ಉಲ್ಲೇಖಿಸದೆ, ಹೀಗೆ ಬರೆದಿದ್ದಾರೆ: "ಆಕೆ ಅಪ್ರತಿಮ ಸುಂದರಿ. ಸಿನಿಮಾ ತಾರೆಯಂತೆ ವೇಷಭೂಷಣ ಧರಿಸಿದ್ದರು. ಆಕೆಯ ಜರತಾರಿ ಸೀರೆ ಜಗಮಗಿಸುತ್ತಿತ್ತು. ಆಕೆ ಧರಿಸಿದ್ದ ಚಿನ್ನದ ಒಡವೆ ಮತ್ತು ಮುತ್ತುಗಳ ಹಾರ ಆಕೆಯ ಸುತ್ತ ವೈಭವದ ಪ್ರಭಾವಳಿಯನ್ನು ಸೃಷ್ಟಿಸಿತ್ತು. ನಾನು ಆಕೆಯನ್ನು ನೋಡುತ್ತಲೇ ಸಮ್ಮೋಹಿತನಾದೆ." ನೆರೂಡ ಈ ಮಾತುಗಳನ್ನಾಡಿರುವುದು ಜವಾಹರ್ ಲಾಲ್ ನೆಹರೂರವರ ತಂಗಿ ವಿಜಯಲಕ್ಷ್ಮಿ ಪಂಡಿತ್‌ರನ್ನು ಊಟಕ್ಕೆ ಭೇಟಿಯಾದ ಸಂದರ್ಭವನ್ನು ನೆನಪಿಸಿಕೊಂಡು. ಇದು ಅನೇಕರಿಗೆ ಪ್ರೇಮಕವಿಯ ರಸಿಕತೆಯಾಗಿ ಕಂಡಿದ್ದಲ್ಲಿ ಅಚ್ಚರಿಯಾಗಲಿ, ಆಘಾತವಾಗಲಿ ಅನಿಸುವುದಿಲ್ಲ.

ಕನ್ನಡದ ಹಲವು ತಲೆಮಾರುಗಳನ್ನು ಪ್ರಭಾವಿಸಿರುವ ಇಪ್ಪತ್ತನೇ ಶತಮಾನದ ಪ್ರಮುಖ ಲೇಖಕ ಹಾಗೂ ಪತ್ರಕರ್ತರಾಗಿದ್ದ ಪಿ. ಲಂಕೇಶ್, ಹಲವು ದಶಕಗಳ ಹಿಂದೆಯೇ 'ಬಿಟ್ಟು ಹೋದ ಪುಟಗಳು' ಹಾಗೂ 'ಮನಕೆ ಕಾರಂಜಿಯ ಸ್ಪರ್ಶ' ಕೃತಿಗಳಲ್ಲಿ ನೆರೂಡರ ಬಗ್ಗೆ ಬರೆಯುತ್ತ, ಅವರ ಜೀವನಪ್ರೇಮದ ಬಗ್ಗೆ, ಸಮತಾವಾದ ಹಾಗೂ ನಿರೀಶ್ವರವಾದದ ಬಗ್ಗೆಯಷ್ಟೇ ಬರೆಯುತ್ತಾರೆ. ಅವರು ಉಲ್ಲೇಖಿಸಿರುವ ಒಂದು ಪ್ರಸಂಗ ನನ್ನ ಲೇಖನದ ಚರ್ಚೆಯ ದೃಷ್ಟಿಯಿಂದ ಸ್ವಾರಸ್ಯಕರವಾಗಿದೆ:

"ಒಂದು ದಿನ ಈತನಿಗೆ ಪರಿಚಿತಳಾದ ಬಡ ಹುಡುಗಿಯೊಬ್ಬಳು ಇವನ ಮನೆಗೆ ಬಂದಳು. ಈಕೆ ಮಗುವೊಂದನ್ನು ಹೆತ್ತಿದ್ದಳು. ಬಡವಳಾದ ಈಕೆಗೆ ಆ ಮಗುವಿನ ತಂದೆ ಕೂಡ ಗೊತ್ತಿರಲಿಲ್ಲ. ಚಿಲಿಯ ಪರ್ವತಗಳಲ್ಲಿ ಅರಳಿದ ಹೂವಿನಂತಹ ಮಗು ಅವಳದು.

'ಕವಿ, ನನ್ನ ಮಗುವಿಗೆ ದತ್ತು ತಂದೆಯಾಗು' ಎಂದು ಈಕೆ ಬೇಡಿಕೊಂಡಳು. ಕವಿ ನೆರೂಡನ ಮನಸ್ಸು ಕರಗಿತು. ಸಮತಾವಾದಿಯಾದ ಈತ ದತ್ತು ತಂದೆಯಾಗುವ ಶ್ರದ್ಧೆಯಿಲ್ಲದಿದ್ದರೂ ಈಕೆಯನ್ನು ಚರ್ಚಿಗೆ ಕರೆದೊಯ್ದು ಈ ವಿಚಾರವನ್ನು ಪೂಜಾರಿಗೆ ಹೇಳಿದ. ಆದರೆ ಪೂಜಾರಿ 'ಕಮ್ಯೂನಿಸ್ಟನಾದವನು



ಚಿಲಿಯ ಇಸ್ಲಾ ನೆಗ್ರಾದಲ್ಲಿನ ನೆರೂಡನ ಮನೆ ಜಗತ್ಪ್ರಸಿದ್ಧ ಕವಿಯ ಅಭಿಮಾನಿಗಳಿಗೆ ಆಕರ್ಷಣೆಯ ಕೇಂದ್ರ.

ಚರ್ಚಿಗೆ ಕಾಲಿರಿಸಲು ಬಿಡುವುದಿಲ್ಲ."

ಸಮಾಜವಾದಿಯಾಗಿ, ಅನ್ಯಾಯ ಅಕ್ರಮಗಳ ಕಟು ಟೀಕಾಕಾರರಾಗಿದ್ದ ಲಂಕೇಶ್, 1977ರಷ್ಟು ಹಿಂದೆಯೇ ಇಂಗ್ಲಿಷ್ ಅನುವಾದದಲ್ಲಿ ಪ್ರಕಟವಾಗಿದ್ದ 'ನೆರೂಡ ನೆನಪುಗಳು' ಕೃತಿಯನ್ನು ಓದಿಲ್ಲದಿರಲು ಸಾಧ್ಯವಿಲ್ಲ. ಹಾಗೆಯೇ, ತೀರ ಇತ್ತೀಚೆಗೆ ನೆರೂಡ ಅವರ ಪ್ರತಿಮಾ ಲೋಕದ ಕುರಿತು ಬರೆದಿರುವ, ಲಂಕೇಶ್ ಶಿಷ್ಯರಾದ ನಟರಾಜ್ ಹುಳಿಯಾರ್ ಕೂಡ. ಅವರಿಬ್ಬರು ನೆರೂಡರ ಅಶ್ಲೀಲ ವರ್ತನೆಯನ್ನು ಖಂಡಿಸಿ ಬರೆಯುವ ಧೈರ್ಯ ತೋರಬೇಕಿತ್ತು ಎಂಬ ನಿರೀಕ್ಷೆ ನನಗಿಲ್ಲ. ಆದರೆ, ಅಮೆರಿಕದ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಡಾಕ್ಟೊರಲ್ ಪದವಿ ಪಡೆದು, ಸ್ತ್ರೀವಾದಿಯಾಗಿ ಗುರುತಿಸಿಕೊಂಡಿರುವ ತೇಜಸ್ವಿನಿ ನಿರಂಜನರಂತಹವರು ಕೂಡ ನೆರೂಡರ